ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಪೊನ್ನಂಪೇಟೆ

ಸಿ.ಸಿ. **464/2024**

ಫಿರ್ಯಾದಿ

ಸಿ.ಇ.ಒ,
ಶ್ರೀಮಂಗಲ ಪಿ.ಎ.ಸಿ.ಸಿ.ಎಸ್ ಲಿ.,
ಶ್ರೀಮಂಗಲ ಶಾಖೆ,
ಪ್ರತಿನಿಧಿಸುವವರು,
ಶ್ರೀ ಎಸ್.ಬಿ.ಯತಿರಾಜ್,
ಪೊನ್ನಂಪೇಟೆ ತಾಲ್ಲೂಕು,
ಎಸ್.ಕೊಡಗು.

---ವಿರುದ್ಧ --

ಆರೋಪಿ :

**ಶ್ರೀ ಡಿ.ಎಮ್.ಪ್ರವೀಣ್ ಕುಮಾರ್,**
**ತಂದೆ: ಮಣಿ,**
**ಪ್ರಾಯ: 41 ವರ್ಷ,**
**ವಾಸ: ಶ್ರೀಮಂಗಲ ಗ್ರಾಮ ಮತ್ತು**
**ಅಂಚೆ, ಪೊನ್ನಂಪೇಟೆ ತಾಲ್ಲೂಕು,**
**ಕೊಡಗು.**

ಆರೋಪಿಯಾದ ನಿಮ್ಮ ವಿರುದ್ಧ ಇರುವ ಆಪಾದನೆ ಏನೆಂದರೆ

<u>ಆಪಾದನೆ</u>

ಏನೆಂದರೆ ಆರೋಪಿಯಾದ ನೀವು ಫಿರ್ಯಾದಿ ಬ್ಯಾಂಕಿನಿಂದ ಸ್ವಸಹಾಯ ಗ್ರೂಪ್ ಲೋನ್ ರಡಿಯಲ್ಲಿ ಸಾಲವನ್ನು ಪಡೆದಿದ್ದು, ಸದರಿ ಸಾಲದ ಹಣವನ್ನು ಮರುಪಾವತಿ ಮಾಡಲು ಆರೋಪಿಯಾದ ನೀವು ಪಿರ್ಯಾದಿದಾರರಿಗೆ ದಿನಾಂಕ:**22.01.2024** ರಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶ್ರೀಮಂಗಲ ಶಾಖೆಗೆ ಸೇರಿದ ಪೋಸ್ಟ್ ಡೇಟೆಡ್ ಚೆಕ್ ಸಂಖ್ಯೆ: **082386** ಅನ್ನು ರೂ.**3,97,856/-** ಗಳಿಗೆ ನೀಡಿರುತ್ತೀರಿ. ಸದರಿ ಚೆಕ್ ಅನ್ನು ಫಿರ್ಯಾದಿಯು ತನ್ನ ಬ್ಯಾಂಕ್ ಆದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶ್ರೀಮಂಗಲ ಶಾಖೆಗೆ ನಗದೀಕರಣಕ್ಕಾಗಿ ದಿ: **23.01.2024** ರಂದು ಸಲ್ಲಿಸಿದಾಗ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣ ಇಲ್ಲ"ಎಂಬ ಕಾರಣದಿಂದ ಹಿಂಬರಹದೊಂದಿಗೆ ಚೆಕ್ ವಾಪಸ್ಸು ಬಂದಿರುತ್ತದೆ.

D.M.Praveen

ನಂತರ ಫಿರ್ಯಾದಿದಾರರು ತನ್ನ ವಕೀಲರ ಮೂಲಕ ದಿನಾಂಕ: **21.02.2024** ರಂದು ನೋಂದಾಯಿತ ಅಂಚೆ ಮೂಲಕ ನೋಟೀಸ್ ಅನ್ನು ನೀಡಿದ್ದರೂ ಸಹ ನೀವು ಹಣವನ್ನು ಮರುಪಾವತಿಸಿರುವುದಿಲ್ಲ ಮತ್ತು ಉದ್ದೇಶ ಪೂರ್ವಕವಾಗಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂಬ ವಿಚಾರವನ್ನು ತಿಳಿದಿದ್ದು ಚೆಕ್ಕನ್ನು ನೀಡಿ ವರ್ಗಾವಣೀಯ ಲಿಖಿತಗಳ ಕಾಯಿದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಆರೋಪಿಯ ಹೇಳಿಕೆ

1. ಪ್ರಶ್ನೆ - ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ ?

ಉತ್ತರ: Yes.

2. ಪ್ರಶ್ನೆ - ಈ ಆರೋಪಣೆಯ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರ: Accd pleaded not guilty and claimed to be tried.

(ಈ ಆರೋಪಣೆಯನ್ನು ದಿನಾಂಕ: **07-11-2024** ರಂದು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ, ಹೇಳಿ,ವಿವರಿಸಿ, ಅವರಿಂದ ಉತ್ತರ ಪಡೆದು ನಾನೇ ಸ್ವತಃ ದಾಖಲಿಸಿದ್ದೇನೆ.)

07/11

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಪೊನ್ನಂಪೇಟೆ,

D M Praveen